# ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹರಿಹರ.

ಉಪಸ್ಥಿತರುಃ- ಶ್ರೀ ವೈ. ಕೆ. ಬೇನಾಳ, ಬಿ.ಎ., ಎಲ್.ಎಲ್.ಬಿ., (ಆನರ್ಸ),
ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,
ಹರಿಹರ.

ದಿನಾಂಕ 19 ನೇ ನವೆಂಬರ್ - 2020

ಅಸಲು ದಾವೆ ಸಂಖ್ಯೆಃ 10 / 2019

ವಾದಿಯರು:- ಮಂಜಪ್ಪ ನಿಂಬಣ್ಣನವರ್ ಹಾಗೂ ಇನ್ನೊಬ್ಬರು

-: ವಿರುದ್ಧ :-

ಪ್ರತಿವಾದಿಯರು:- ಶ್ರೀ ಕರಡಿ ಭರ್ಮಪ್ಪ ಯಾನೆ ಭರ್ಮಪ್ಪ
ನಿಂಬಣ್ಣನವರ್ ಹಾಗೂ ಇತರರು

ಮಧ್ಯಂತರ ಅರ್ಜಿ ಸಂಖ್ಯೆ - 1

ಅರ್ಜಿದಾರರು :-1. ಮಂಜಪ್ಪ ನಿಂಬಣ್ಣನವರ್,
ತಂದೆ ಕರಡಿ ಭರ್ಮಪ್ಪ ಯಾನೆ ಭರ್ಮಪ್ಪ,
ನಿಂಬಣ್ಣನವರ್, ವಯಸ್ಸು ಸುಮಾರು 56 ವರ್ಷ,
ಕೃಷಿಕ, ವಾಸ: ರಾಜನಹಳ್ಳಿ ಗ್ರಾಮ,
ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.

2. ಲಕ್ಷ್ಮವ್ವ ಕೋಂ ನಿಂಗಪ್ಪ ಬನ್ನಿಕೋಡು,
ತಂದೆ ಕರಡಿ ಭರ್ಮಪ್ಪ, ,
ವಯಸ್ಸು ಸುಮಾರು 55 ವರ್ಷ,
ಕೃಷಿಕಳು, ವಾಸ: ಮಾಕನೂರು ಗ್ರಾಮ,
ರಾಣೆಬೆನ್ನೂರು ತಾಲ್ಲೂಕು, ಹಾವೇರಿ ಜಿಲ್ಲೆ.

(ಅರ್ಜಿದಾರರ ಪರ ವಕೀಲರು - ಶ್ರೀ ಎ.ಸಿ.ಕೆ)

-:: ವಿರುದ್ಧ ::-

ಎದುರುದಾರರು:- 1. ಶ್ರೀ ಕರಡಿ ಧರ್ಮಪ್ಪ ಯಾನೆ ಧರ್ಮಪ್ಪ
ನಿಂಬಣ್ಣನವರ್ ತಂದೆ ಮೃತ ಮಲ್ಲಪ್ಪ,
ವಯಸ್ಸು ಸುಮಾರು 70 ವರ್ಷ,
ಕೃಷಿಕ, ವಾಸ: ರಾಜನಹಳ್ಳಿ ಗ್ರಾಮ,
ಹರಿಹರ ತಾಲ್ಲೂಕು.

2. ಶ್ರೀಮತಿ ವನಜಾಕ್ಷವ್ವ,
ತಂದೆ ಕರಡಿ ಧರ್ಮಪ್ಪ ಯಾನೆ ಧರ್ಮಪ್ಪ
ನಿಂಬಣ್ಣನವರ್, ಕೋಂ ಮೌನೇಶಪ್ಪ
ಕಾಳಪ್ಪನವರ್,
ವಯಸ್ಸು ಸುಮಾರು 51 ವರ್ಷ,
ಕೃಷಿಕಳು, ವಾಸ: ರಾಹುತನ ಕಟ್ಟಿ ಗ್ರಾಮ,
ರಾಣೆಬೆನ್ನೂರು ತಾಲ್ಲೂಕು, ಹಾವೇರಿ ಜಿಲ್ಲೆ.

3. ಶ್ರೀ ಬಸಪ್ಪ ಎನ್. ಬಿ ತಂದೆ ಕರಡಿ ಧರ್ಮಪ್ಪ
ಯಾನೆ ಧರ್ಮಪ್ಪ ನಿಂಬಣ್ಣನವರ್,
ವಯಸ್ಸು ಸುಮಾರು 45 ವರ್ಷ,
ಎ.ಸಿ.ಬಿ ಪೋಲೀಸ್ ಇಲಾಖೆಯಲ್ಲಿ ಜೀಬ್
ಚಾಲಕ, ಹಾವೇರಿ.

4. ಶ್ರೀಮತಿ ರೇಣುಕಮ್ಮ ಕೋಂ ಮೃತ ಗುಡ್ಡಪ್ಪ,
ವಯಸ್ಸು ಸುಮಾರು 35 ವರ್ಷ,
ಕೃಷಿಕಳು, ಬೆಳ್ಳೂಡಿ ಗ್ರಾಮ,
ಹರಿಹರ ತಾಲ್ಲೂಕು.

5. ಶ್ರೀಮತಿ ಶಶಿಕಲ ತಂದೆ ಮೃತ ಗುಡ್ಡಪ್ಪ,
ವಯಸ್ಸು ಸುಮಾರು 22 ವರ್ಷ,
ಕೃಷಿಕಳು, ಬೆಳ್ಳೂಡಿ ಗ್ರಾಮ,
ಹರಿಹರ ತಾಲ್ಲೂಕು,
ದಾವಣಗೆರೆ ಜಿಲ್ಲೆ.

6. ಶ್ರೀ ಮಲ್ಲಪ್ಪ ತಂದೆ ಕರಡಿ ಭರ್ಮಪ್ಪ
ಯಾನೆ ಭರ್ಮಪ್ಪ ನಿಂಬಣ್ಣನವರ್,
ವಯಸ್ಸು ಸುಮಾರು 40 ವರ್ಷ,
ಕ.ರಾ.ರ.ಸಾ.ನಿ ಇಲಾಖೆಯಲ್ಲಿ ನೌಕರ,
ವಾಸ: ಶಿರಾ, ತುಮಕೂರು ಜಿಲ್ಲೆ.

7. ಶ್ರೀಮತಿ ಸುವರ್ಣ ಕೋಂ ಬಸಪ್ಪ ಎನ್.ಬಿ,
ಎ.ಸಿ.ಬಿ ಪೋಲೀಸ್, ಹಾವೇರಿ,
ವಯಸ್ಸು ಸುಮಾರು 38 ವರ್ಷ,
ವಾಸ: ಪ್ಲಾಟ್ ಸಂ.14, ತುಂಗಭದ್ರಾ ಬಡಾವಣೆ,
ಪಿ.ಬಿ ರಸ್ತೆ, ಕುಮಾರಪಟ್ಟಣಂ,
ರಾಣೆಬೆನ್ನೂರು ತಾಲ್ಲೂಕು, ಹಾವೇರಿ ಜಿಲ್ಲೆ.

(1 ನೇ ಎದುರುದಾರನ ಪರ ವಕೀಲರು - ಶ್ರೀ ಸಿ.ಎಮ್.ಎನ್)
(2 ನೇ ಎದುರುದಾರಳ ಪರ ವಕೀಲರು - ಶ್ರೀ ಟಿ.ಎಸ್.ಜೆ)
(3 ಮತ್ತು 7 ನೇ ಎದುರುದಾರರ ಪರ ವಕೀಲರು - ಶ್ರೀ ಎಸ್.ಎ.ಕೆ)
(4 ರಿಂದ 6 ನೇ ಎದುರುದಾರರ ಪರ ವಕೀಲರು - ಶ್ರೀ ಟಿ.ಜೆ.ಎಮ್)

-:oOo:-

-:: ಮಧ್ಯಂತರ ಅರ್ಜಿ ಸಂಖ್ಯೆ - 1 ರ ಮೇಲೆ ಆದೇಶ ::-

ಅರ್ಜಿದಾರರು / ವಾದಿಯರು ಈ ಮಧ್ಯಂತರ ಅರ್ಜಿ ಸಂಖ್ಯೆ- 1 ನ್ನು ಸಿ. ಪ್ರ. ಸಂ. ಆದೇಶ 39 ನಿಯಮ 1 ಮತ್ತು 2 ರ ಅಡಿಯಲ್ಲಿ ಸಲ್ಲಿಸಿ ದಾವೆ ಅಂತಿಮವಾಗಿ ಇತ್ಯರ್ಥಗೊಳ್ಳುವವರೆಗೆ ದಾವಾ ಆಸ್ತಿಗಳನ್ನು 1 ರಿಂದ 3, 6 ಹಾಗೂ 7 ನೇ ಪ್ರತಿವಾದಿಗಳು/ ಎದುರುದಾರರು ಯಾವುದೇ ರೀತಿ ಪರಭಾರೆ ಮಾಡದಂತೆ ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ನೀಡಬೇಕೆಂದು ಕೋರಿರುತ್ತಾರೆ.

2. 1ನೇ ವಾದಿ / 1ನೇ ಅರ್ಜಿದಾರನು ಈ ಮಧ್ಯಂತರ ಅರ್ಜಿಯನ್ನು ತನ್ನ ಪ್ರಮಾಣಪತ್ರದೊಂದಿಗೆ ಸಲ್ಲಿಸಿ ಅದರಲ್ಲಿ ವಿವರವಾದ ಕಾರಣಗಳನ್ನು ಹೇಳಿ ಸದರಿ ಕಾರಣಗಳ ಮೇಲೆ ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಬೇಕು ಎಂದು ಪ್ರಾರ್ಥಿಸಿಕೊಂಡಿರುತ್ತಾನೆ.

3. 3ನೇ ಪ್ರತಿವಾದಿ ಈ ಮದ್ಯಂತರ ಅರ್ಜಿಗೆ ತಕರಾರನ್ನು ಸಲ್ಲಿಸಿದ್ದು ಹಾಗೂ 1,2, 4 ರಿಂದ 6ನೇ ಪ್ರತಿವಾದಿಗಳು ಮೆಮೋ ಸಲ್ಲಿಸುವುದರ ಮೂಲಕ ತಮ್ಮ ಲಿಖಿತ-ಹೇಳಿಕೆಯನ್ನು ಈ ಮಧ್ಯಂತರ ಅರ್ಜಿಗೆ ತಕರಾರು ಎಂದು ಅಳವಡಿಸಿಕೊಂಡಿರುತ್ತಾರೆ ಹಾಗೂ 7ನೇ ಪ್ರತಿವಾದಿ ಮೆಮೋ ಸಲ್ಲಿಸುವುದರ ಮೂಲಕ 3ನೇ ಪ್ರತಿವಾದಿಯ ತಕರಾರನ್ನೇ ಅಳವಡಿಸಿಕೊಂಡಿರುತ್ತಾರೆ. 3ನೇ ಪ್ರತಿವಾದಿ ತನ್ನ ತಕರಾರಿನಲ್ಲಿ ವಿವರವಾದ ಕಾರಣಗಳನ್ನು ಹೇಳಿ ಸದರಿ ಕಾರಣಗಳ ಮೇಲೆ ಈ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾನೆ.

4. ವಾದಿಗಳ ಮತ್ತು 1 ಮತ್ತು 3 ರಿಂದ 7ನೇ ಪ್ರತಿವಾದಿಗಳ ಪರ ವಕೀಲರ ವಾದ-ವಿವಾದವನ್ನು ಆಲಿಸಲಾಯಿತು. 2ನೇ ಪ್ರತಿವಾದಿಗೆ ಮಾನ್ಯ ಉಚ್ಛ ನ್ಯಾಯಾಲಯದ ಎಸ್.ಒ.ಪಿ ಪ್ರಕಾರ ನೋಟೀಸನ್ನು ನೀಡಿದ್ದರೂ ಸಹ 2ನೇ ಪ್ರತಿವಾದಿ ಪರ ವಕೀಲರು ಗೈರು ಹಾಜರಿದ್ದ ಕಾರಣ ಅವರ ಪರ ವಾದಮಂಡನೆ ಇಲ್ಲವೆಂದು ತೆಗೆದುಕೊಂಡಿರುತ್ತದೆ

5. ನನ್ನ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆಃ-

ಅಂಶ-1 - ಅರ್ಜಿದಾರರು / ವಾದಿಗಳು ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ ತಾತ್ಕಾಲಿಕ ನಿರ್ಭಂದಕಾಜ್ಞೆ ಪರಿಹಾರವನ್ನು ಪಡೆಯಲು ಮೇಲ್ನೋಟದ ಕೇಸು ಇರುವುದನ್ನು ತೋರಿಸಿದ್ದಾರೆಯೇ?

ಅಂಶ-2 - ಅನುಕೂಲತೆಯ ಒಲವು ಯಾರ ಪರ ಇದೆ?

ಅಂಶ-3 - ಅರ್ಜಿದಾರರು / ವಾದಿಗಳು ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ ತಾತ್ಕಾಲಿಕ ನಿರ್ಭಂದಕಾಜ್ಞೆ ನೀಡದೇ ಇದ್ದರೆ ವಾದಿಗಳಿಗೆ ಹಣದ ರೂಪದಲ್ಲಿ ತುಂಬಲಾರದಂತಹ ನಷ್ಟ ಉಂಟಾಗುತ್ತದೆಯೇ?

ಅಂಶ- 4- ಯಾವ ಆದೇಶ?

6. ಮೇಲಿನ ಅಂಶಗಳಿಗೆ ಈ ಕೆಳಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಉತ್ತರಿಸುತ್ತಿದ್ದೇನೆಃ-

ಅಂಶ-1 - ಸಕಾರಾತ್ಮಕ

ಅಂಶ-2 - ಸಕಾರಾತ್ಮಕ

ಅಂಶ-3 - ಸಕಾರಾತ್ಮಕ

ಅಂಶ-4 - ಅಂತಿಮ ಆದೇಶದಂತೆಃ

ಕಾರಣಗಳು

7. ಅಂಶ-1:– ಅರ್ಜಿದಾರರು/ವಾದಿಗಳು ತಮ್ಮ ವಾದಪತ್ರದಲ್ಲಿ ಒಬ್ಬ ಮಲ್ಲಪ್ಪ ಕುಟುಂಬದ ಪೂರ್ವಜನಿದ್ದು ಅವನಿಗೆ ಭರ್ಮಪ್ಪ, ನೀಲಪ್ಪ ಮತ್ತು ನಿಂಗಪ್ಪ ಎಂಬ ಮೂರು ಜನ ಗಂಡು ಮಕ್ಕಳು. ಸದರಿ ನಿಂಗಪ್ಪ ದತ್ತಕ ಹೋಗಿರುತ್ತಾನೆ. ಸದರಿ ಮಲ್ಲಪ್ಪ ಬಹಳ ಹಿಂದೆಯೇ ಮೃತಪಟ್ಟಿದ್ದು ಅವನು ಮೃತ ಪಟ್ಟ ನಂತರ ಅವನ ಇಬ್ಬರು ಮಕ್ಕಳಾದ ಭರ್ಮಪ್ಪ ಮತ್ತು ನೀಲಪ್ಪ ಜಂಟಿ ಕುಟುಂಬದ ಸದಸ್ಯರಾಗಿ ದಾವಾ ಆಸ್ತಿಗಳನ್ನು ಅನುಭವಿಸಿಕೊಂಡು ಬಂದಿರುತ್ತಾರೆ. ಸದರಿ ಭರ್ಮಪ್ಪ ಮತ್ತು ನೀಲಪ್ಪ ತಮ್ಮ ಪಿತ್ರಾರ್ಜಿತವಾದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುತ್ತಾರೆ ಅದರಂತೆ 1ನೇ ಪ್ರತಿವಾದಿಯ ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳು ಅವುಗಳನ್ನು ಅನುಭವಿಸುತ್ತಿದ್ದರು. ದಾವಾ 'ಎ' ತಪಶೀಲಿನ 4ನೇ ಆಸ್ತಿ ಮತ್ತು ದಾವಾ 'ಬಿ' ತಪಶೀಲಿನ 2 ಹಾಗೂ 3ನೇ ಆಸ್ತಿಗಳನ್ನು ಜಂಟಿ ಕುಟುಂಬದ ಆದಾಯದಿಂದ ಖರೀದಿಸಿರುತ್ತದೆ ಎಂದು ಆರೋಪಿಸಿ ದಾವಾ ಆಸ್ತಿಗಳಲ್ಲಿ ತಮಗೆ ತಲಾ 1/7 ಹಿಸ್ಸೆಯನ್ನು ಹಾಗೂ ಅವುಗಳ ಪ್ರತ್ಯೇಕ ಸ್ವಾಧೀನತೆಯನ್ನು ಕೊಡಿಸಬೇಕೆಂದು ವಾದಿಗಳು ಕೋರಿರುತ್ತಾರೆ. ಆದರೆ 1ನೇ

ಪ್ರತಿವಾದಿ ತನ್ನ ಲಿಖಿತ-ಹೇಳಿಕೆಯಲ್ಲಿ 1999 ರಲ್ಲಿ ವಾದಿಗಳು ಮತ್ತು ಪ್ರತಿವಾದಿಗಳು ಪಂಚರ ಸಮಕ್ಷಮ ದಾವಾ 'ಎ' ತಪಶೀಲಿನ 1 ರಿಂದ 3 ನೇ ಆಸ್ತಿಗಳು ಹಾಗೂ ಗ್ರಾಮ ಪಂಚಾಯ್ತಿ ಆಸ್ತಿ ಸಂ.209 ನೇದವುಗಳನ್ನು ಹಂಚಿಕೊಂಡು ತಮ್ಮ ತಮ್ಮ ಹಿಸ್ಸೆಗೆ ಬಂದ ಆಸ್ತಿಗಳನ್ನು ಪ್ರತ್ಯೇಕವಾಗಿ ವಹಿವಾಟು ಮಾಡುತ್ತಾ ಬಂದಿರುತ್ತಾರೆ. 1 ನೇ ಪ್ರತಿವಾದಿಯ ಬಳಿ ಒಟ್ಟು ಕುಟುಂಬಕ್ಕೆ ಸಂಬಂಧಪಟ್ಟ ಯಾವುದೇ ಚಿರ-ಚರ ಸ್ವತ್ತು ಉಳಿದಿರುವುದಿಲ್ಲ. ದಾವಾ 'ಬ' ತಪಶೀಲಿನ 1 ನೇ ಆಸ್ತಿಯು 1 ನೇ ಪ್ರತಿವಾದಿಯ ಸ್ವಂತ ಪರಿಶ್ರಮದಿಂದ ಖರೀದಿಸಿದ ಸ್ವಯಾರ್ಜಿತವಾದ ಆಸ್ತಿ ಇರುತ್ತದೆ ಆದ್ದರಿಂದ 1 ನೇ ಪ್ರತಿವಾದಿಯು 2 ನೇ ಪ್ರತಿವಾದಿ ಹೆಸರಿಗೆ ಸದರಿ ಆಸ್ತಿಯ ಕುರಿತು ದಾನಪತ್ರವನ್ನು ಬರೆದುಕೊಟ್ಟಿದ್ದು ಮತ್ತು 3 ಹಾಗೂ 7 ನೇ ಪ್ರತಿವಾದಿಯರ ಹೆಸರಿನಲ್ಲಿ ದಾವಾ 'ಅ' ತಪಶೀಲಿನ 4 ನೇ ಆಸ್ತಿ ಹಾಗೂ 'ಬ' ತಪಶೀಲಿನ 2 ಮತ್ತು 3 ನೇ ಆಸ್ತಿಗಳು ನೋಂದಾಯಿತ ಖರೀದಿ ಪತ್ರ ಆಗಿರುವುದನ್ನು ಪ್ರಶ್ನಿಸಲು ವಾದಿಯರಿಗೆ ಯಾವುದೇ ಅಧಿಕಾರ ಇರುವುದಿಲ್ಲ ದಿನಾಂಕ 11.04.1999 ರಂದು ಹಿಸ್ಸೆಯಾಗಿ ಆ ಪ್ರಕಾರ ವಾದಿ ಪ್ರತಿವಾದಿಯರು ತಮ್ಮ ತಮ್ಮ ಹಿಸ್ಸೆಗೆ ಬಂದ ಆಸ್ತಿಗಳನ್ನು ತಮ್ಮ ಸ್ವಾಧೀನದಲ್ಲಿಟ್ಟುಕೊಂಡು ಪ್ರತ್ಯೇಕವಾಗಿ ವಹಿವಾಟು ಉಪಯೋಗ ಮಾಡುತ್ತಾ ಬಂದಿರುತ್ತಾರೆ ಎಂದು ತನ್ನ ಪ್ರತಿರಕ್ಷೆಯನ್ನು ತೆಗೆದುಕೊಂಡಿರುತ್ತಾನೆ ಹಾಗೂ 2 ನೇ ಪ್ರತಿವಾದಿ ತನ್ನ ಲಿಖಿತ-ಹೇಳಿಕೆಯಲ್ಲಿ ದಾವಾ 'ಬ' ತಪಶೀಲಿನ 1 ನೇ ಆಸ್ತಿಯನ್ನು 2 ನೇ ಪ್ರತಿವಾದಿ ಹಾಗೂ 'ಅ' ತಪಶೀಲಿನ 4 ನೇ ಆಸ್ತಿಯನ್ನು ಮತ್ತು 'ಬ' ತಪಶೀಲಿನ 2 ಹಾಗೂ 3 ನೇ ಆಸ್ತಿಗಳು 3 ಮತ್ತು 7 ನೇ ಪ್ರತಿವಾದಿಯರ ವಹಿವಾಟು ಮಾಡುತ್ತಿದ್ದು 3 ಮತ್ತು 7 ನೇ ಪ್ರತಿವಾದಿಗಳು ಅವರ ಸ್ವಂತ ಪರಿಶ್ರಮದಿಂದ ಖರೀದಿಸಿದ

ಆಸ್ತಿಗಳಾಗಿರುತ್ತವೆ ಎಂದು ಹಾಗೂ 1999 ರಲ್ಲಿ ಆದ ವಿಭಾಗದಂತೆ ವಾದಿಯರು ಮತ್ತು ಪ್ರತಿವಾದಿಯರು ತಮ್ಮ ತಮ್ಮ ಹಿಸ್ಸೆಗೆ ಬಂದ ಆಸ್ತಿಗಳನ್ನು ಸ್ವಾಧೀನಾನುಭವ ಹೊಂದಿರುತ್ತಾರೆಂದು ಪ್ರತಿರಕ್ಷೆಯನ್ನು ತೆಗೆದುಕೊಂಡಿರುತ್ತಾಳೆ ಹಾಗೂ 3ನೇ ಪ್ರತಿವಾದಿ ತನ್ನ ಲಿಖಿತ-ಹೇಳಿಕೆಯಲ್ಲಿ ದಿನಾಂಕ 11-04-1999 ರಲ್ಲಿ ದಾವಾ 'ಎ' ಷೆಡ್ಯೂಲಿನ 1 ರಿಂದ 3ನೇ ಆಸ್ತಿಗಳಿಗೆ ಸಂಬಂಧಿಸಿದಂತೆ 1ನೇ ವಾದಿ ಹಾಗೂ 3,4 ಹಾಗೂ 6ನೇ ಪ್ರತಿವಾದಿಗಳ ಮಧ್ಯೆ ಪಾಲು-ವಿಭಾಗವಾಗಿರುತ್ತದೆ ನಂತರ 3ನೇ ಪ್ರತಿವಾದಿಯು ದಾವಾ 'ಬ' ತಪಶೀಲಿನ 2ನೇ ಆಸ್ತಿಯನ್ನ ದಿನಾಂಕ 13-08-2018 ರಂದು ಹಾಗೂ 'ಬ' ಷೆಡ್ಯೂಲಿನ 3ನೇ ಆಸ್ತಿಯನ್ನು ದಿನಾಂಕ 25-08-2004 ರಂದು ಖರೀದಿಸಿರುತ್ತಾನೆ ಮತ್ತು 7ನೇ ಪ್ರತಿವಾದಿಯು ದಾವಾ 'ಎ' ಷೆಡ್ಯೂಲಿನ 4ನೇ ಆಸ್ತಿಯನ್ನು ದಿನಾಂಕ 25-10-2016 ರಂದು ಖರೀದಿಸಿದ್ದು ಈ ಎಲ್ಲಾ ಆಸ್ತಿಗಳನ್ನು 3ನೇ ಪ್ರತಿವಾದಿ ತನ್ನ ಸ್ವಂತ ಗಳಿಕೆಯಿಂದ ಮತ್ತು 7ನೇ ಪ್ರತಿವಾದಿಯ ಪಾಲಕರ ಹಣಕಾಸಿನ ಸಹಾಯದೊಂದಿಗೆ ಖರೀದಿಸಿರುತ್ತದೆ ಎಂದು ಹಾಗೂ ದಾವಾ 'ಎ' ತಪಶೀಲಿನ 3ನೇ ಆಸ್ತಿ ಮತ್ತು ಖುಲ್ಲಾ ಜಾಗೆ ವಿಸ್ತೀರ್ಣ 1 ಎಕರೆ 4 ಗುಂಟೆಯು ಪಾಲು-ವಿಭಾಗದಲ್ಲಿ 1ನೇ ವಾದಿಯ ಹಿಸ್ಸೆಗೆ ಬಂದಿರುತ್ತವೆ. ದಾವಾ 'ಬಿ' ತಪಶೀಲಿನ 1ನೇ ಆಸ್ತಿಯನ್ನು 1ನೇ ಪ್ರತಿವಾದಿಯು ದಿನಾಂಕ 11.07.1983 ರಲ್ಲಿ ಖರೀದಿಸಿದ್ದು ಅವನು 2ನೇ ಪ್ರತಿವಾದಿಯ ಪರ ನೋಂದಾಯಿತ ದಾನ ಪತ್ರವನ್ನು ಬರೆದುಕೊಟ್ಟಿರುತ್ತಾನೆ ಅದರಂತೆ 2ನೇ ಪ್ರತಿವಾದಿಯು ಸದರಿ ಆಸ್ತಿಯ ಸ್ವಾಧೀನತೆಯಲ್ಲಿ ಇರುತ್ತಾಳೆ ಎಂದು ತನ್ನ ಪ್ರತಿರಕ್ಷೆಯನ್ನು ತೆಗೆದುಕೊಂಡಿರುತ್ತಾನೆ ಹಾಗೂ 4ನೇ ಪ್ರತಿವಾದಿಯು ತನ್ನ ಲಿಖಿತ ಹೇಳಿಕೆಯಲ್ಲಿ 1990ನೇ ಸಾಲಿನಲ್ಲಿ ಆದ ವಾಟ್ನಿ ಪತ್ರದಂತೆ ವಾದಿಗಳು ಮತ್ತು ಪ್ರತಿವಾದಿಯರು ತಮ್ಮ ತಮ್ಮ ಹಿಸ್ಸೆಗೆ ಬಂದ

ಆಸ್ತಿಗಳನ್ನು ತಮ್ಮ ಸ್ವಾಧೀನದಲ್ಲಿಟ್ಟುಕೊಂಡು ವಹಿವಾಟು ಮಾಡುತ್ತಾ ಬಂದಿರುತ್ತಾರೆ ಎಂದು ತನ್ನ ಪ್ರತಿರಕ್ಷೆಯನ್ನು ತೆಗೆದುಕೊಂಡ ಕಾರಣ ವಾದಿ ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ ತಾತ್ಕಾಲಿಕ ನಿರ್ಭಂಧಕಾಜ್ಞೆಯ ಪರಿಹಾರವನ್ನು ಪಡೆಯಲು ಮೇಲ್ನೋಟಕ್ಕೆ ದಾವಾ ಆಸ್ತಿಗಳು ಪಿತ್ರಾರ್ಜಿತವಾದ ಜಂಟಿ ಕುಟುಂಬದ ಆಸ್ತಿಗಳು ಅವುಗಳಲ್ಲಿ ತಮಗೆ ಹಿಸ್ಸೆಯ ಹಕ್ಕು ಇರುತ್ತದೆ ಎನ್ನುವುದನ್ನು ತೋರಿಸಬೇಕು.

8. ವಾದಿಗಳು 1ನೇ ಪ್ರತಿವಾದಿಯ ಮಕ್ಕಳು ಎನ್ನುವುದು ನಿರ್ವಿವಾದವಾದ ಸಂಗತಿ ಹಾಗೂ ವಾದಿಗಳು ಮತ್ತು ಪ್ರತಿವಾದಿಗಳು ಹಾಜರುಪಡಿಸಿರುವಂತಹ ದಾಖಲೆಗಳನ್ನು ಅವಲೋಕಿಸಲಾಗಿ ದಾವಾ 'ಎ' ತಪಶೀಲಿನ 1, 2 ಮತ್ತು 3ನೇ ಆಸ್ತಿಗಳು 1ನೇ ಪ್ರತಿವಾದಿಯ ಹೆಸರಿನಲ್ಲಿ ಇರುವುದು ವಾದಿಗಳು ಹಾರಜುಪಡಿಸಿರುವಂತಹ 2017-18 ನೇ ಸಾಲಿನ ಪಹಣಿ ಪತ್ರಿಕೆಗಳಿಂದ ಮೇಲ್ನೋಟಕ್ಕೆ ಕಂಡು ಬರುತ್ತದೆ ಹಾಗೂ ದಾವಾ 'ಎ' ತಪಶೀಲಿನ 4ನೇ ಆಸ್ತಿಯು 7ನೇ ಪ್ರತಿವಾದಿಯ ಹೆಸರಿನಲ್ಲಿ ಇರುವುದು 2018-19ನೇ ಸಾಲಿನ ಪಹಣಿ ಪತ್ರಿಕೆಯಿಂದ ಕಂಡು ಬರುತ್ತದೆ ಹಾಗೂ ದಾವಾ 'ಬಿ' ತಪಶೀಲಿನ 1ನೇ ಆಸ್ತಿಯು ಮೊದಲು 1ನೇ ಪ್ರತಿವಾದಿಯ ಹೆಸರಿನಲ್ಲಿದ್ದು ದಾನಪತ್ರದ ಆಧಾರದ ಮೇಲೆ 2ನೇ ಪ್ರತಿವಾದಿಯ ಹೆಸರಿನಲ್ಲಿರುವುದು ಹೌಸ್ ಲಿಸ್ಟ್ ಪುಸ್ತಕದ ನಕಲಿನಿಂದ ಕಂಡು ಬರುತ್ತದೆ ಹಾಗೂ ದಾವಾ 'ಬಿ' ತಪಶೀಲಿನ 2ನೇ ಆಸ್ತಿಯು 3ನೇ ಪ್ರತಿವಾದಿಯ ಹೆಸರಿನಲ್ಲಿ ಇರುವುದು ಮನೆ ಕರ ನಿರ್ಧರಣಾ ಪಟ್ಟಿಯಿಂದ ಮೇಲ್ನೋಟಕ್ಕೆ ಕಂಡು ಬರುತ್ತದೆ ಹಾಗೂ ದಾವಾ 'ಬ' ತಪಶೀಲಿನ 3ನೇ ಆಸ್ತಿಯು 3ನೇ ಪ್ರತಿವಾದಿಯ ಹೆಸರಿನಲ್ಲಿ ಕ್ರಯದ ಆಧಾರದ ಮೇಲೆ

ಇರುವುದು ಹೌಸ್ ಲಿಸ್ಟ್ ಪುಸ್ತಕದ ನಕಲಿನಿಂದ ಮೇಲ್ನೋಟಕ್ಕೆ ಕಂಡು ಬರುತ್ತದೆ ಹಾಗೂ 2ನೇ ಪ್ರತಿವಾದಿ ಹಾಜರುಪಡಿಸಿರುವಂತಹ ದಾಖಲೆಗಳನ್ನು ಅವಲೋಕಿಸಲಾಗಿ ದಿನಾಂಕ 11-07-1983 ರಂದು 1ನೇ ಪ್ರತಿವಾದಿಯು ದಾವಾ 'ಬ' ತಪಶೀಲಿನ 1ನೇ ಆಸ್ತಿಯನ್ನು ನೋಂದಾಯಿತ ಕ್ರಯ ಪತ್ರದ ಮೂಲಕ ಖರೀದಿಸಿರುವುದು ಮೇಲ್ನೋಟಕ್ಕೆ ನೋಂದಾಯಿತ ಕ್ರಯಪತ್ರದ ಮೂಲಕ ಕಂಡು ಬರುತ್ತದೆ ಹಾಗೂ ಸದರಿ ಆಸ್ತಿಗೆ ಸಂಬಂಧಿಸಿದಂತೆ 1ನೇ ಪ್ರತಿವಾದಿಯು ದಿನಾಂಕ 22-09-2017 ರಂದು 2ನೇ ಪ್ರತಿವಾದಿಯ ಪರ ನೋಂದಾಯಿತ ದಾನಪತ್ರವನ್ನು ಬರೆದು ಕೊಟ್ಟಿರುವುದು ದಾನಪತ್ರದ ಮೂಲಕ ಮೇಲ್ನೋಟಕ್ಕೆ ಕಂಡುಬರುತ್ತದೆ.

9. 3 ಮತ್ತು 7ನೇ ಪ್ರತಿವಾದಿಗಳು ಹಾಜರುಪಡಿಸಿರುವಂತಹ ದಾಖಲೆಗಳನ್ನು ಅವಲೋಕಿಸಲಾಗಿ ಹರಿಹರ ತಾಲ್ಲೂಕಾ ರಾಜನಹಳ್ಳಿ ಗ್ರಾಮದ ಸ.ನಂ.51/2 ರಲ್ಲಿ 1ನೇ ವಾದಿಯ ಹೆಸರಿಗೆ 1 ಎಕರೆ 4 ಗುಂಟೆ ಜಮೀನು ಇರುವುದು ಪಹಣಿ ಪತ್ರಿಕೆಯಿಂದ ಮೇಲ್ನೋಟಕ್ಕೆ ಕಂಡು ಬರುತ್ತದೆ ಹಾಗೂ 1ನೇ ವಾದಿಯ ಹೆಸರಿಗೆ ರಾಜನಹಳ್ಳಿಯಲ್ಲಿ ಆಸ್ತಿ ಸಂ.7 ಇರುವುದು ಹೌಸ್ ಲಿಸ್ಟ್ ಪುಸ್ತಕದ ನಕಲಿನಿಂದ ಮೇಲ್ನೋಟಕ್ಕೆ ಕಂಡು ಬರುತ್ತದೆ ಹಾಗೂ 3ನೇ ಪ್ರತಿವಾದಿಯು ಕೋಡಿಯಾಲ ಗ್ರಾಮದಲ್ಲಿರುವ ಆಸ್ತಿ ನಂ.702/14 ನ್ನು ದಿನಾಂಕ 13-08-2018 ರಂದು ರಾಮಪ್ಪ, ನೀಲವ್ವ, ಮೋಹನ ಹಾಗೂ ಯಶೋಧ ಯಾನೆ ಹೊನ್ನಮ್ಮ ಇವರಿಂದ ಖರೀದಿಸಿರುವುದು ಮೇಲ್ನೋಟಕ್ಕೆ ನೋಂದಾಯಿತ ಕ್ರಯಪತ್ರದಿಂದ ಕಂಡು ಬರುತ್ತದೆ ಹಾಗೂ ದಿನಾಂಕ 25-08-2004 ರಂದು 3ನೇ ಪ್ರತಿವಾದಿಯು ಒಬ್ಬ ಬಸಯ್ಯ ತಂದೆ ಶಿವಯ್ಯ ಇವರಿಂದ ರಾಜನಹಳ್ಳಿ ಗ್ರಾಮ ಪಂಚಾತ್ತಿಗೆ ಸೇರಿದ ಖಾತೆ ನಂ.489

ಖಾನುಷ್ಮಾರಿ ನಂ.210 ರಲ್ಲಿ ದಕ್ಷಿಣ ದಿಕ್ಕಿನ ಕಡೆಗೆ ಇರುವ 45 ಇಂಟು 25 ಅಡಿ ಖಾಲಿ ನಿವೇಶನವನ್ನು ಖರೀದಿಸಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ ಹಾಗೂ 7ನೇ ಪ್ರತಿವಾದಿಯು ಒಬ್ಬ ಮೌನೇಶಪ್ಪ ತಂದೆ ಪುಟ್ಟಪ್ಪ ಕಾಳಪ್ಪನವರ್ ಇವರಿಂದ ಮೆಡ್ಲೇರಿ ಗ್ರಾಮದ ಜಮೀನು ಸ.ನಂ.339/5 ಅಂದರೆ ದಾವಾ 'ಎ' ತಪಶೀಲಿನ 4ನೇ ಆಸ್ತಿಯನ್ನು ದಿನಾಂಕ 25-10-2016 ರಂದು ನೋಂದಾಯಿತ ಕ್ರಯಪತ್ರದ ಮೂಲಕ ಖರೀದಿಸಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ ಹಾಗೂ ದಿನಾಂಕ 11-04-1999 ರಲ್ಲಿ ಮಂಜಪ್ಪ, ಬಸವರಾಜಪ್ಪ, ರೇಣುಕಮ್ಮ, ಮಲ್ಲೇಶಪ್ಪ ಇವರುಗಳು ಜುಬಾನಿ ಪಾಲು-ವಿಭಾಗ ಮಾಡಿಕೊಂಡಿರುತ್ತಾರೆಂದು ಬಿಳಿ ಹಾಳೆಯ ಮೇಲೆ ಬರೆದಂತಹ ದಾಖಲೆಯಿಂದ ಮೇಲ್ನೋಟಕ್ಕೆ ಕಂಡು ಬರುತ್ತದೆ ಹಾಗೂ 3ನೇ ಪ್ರತಿವಾದಿಯು ಪೋಲೀಸ್ ಮುಖ್ಯ ಪೇದೆ ಇದ್ದು ಅವನು ವೇತನವನ್ನು ಹೊಂದಿದ್ದು ಅವನು ಎಸ್.ಬಿ.ಐ ಬ್ಯಾಂಕಿನಲ್ಲಿ 6 ಲಕ್ಷ ರೂ.ಗಳನ್ನು ಸಾಲವಾಗಿ ಪಡೆದುಕೊಂಡಿರುವುದು ಮತ್ತು ಎಲ್.ಐ.ಸಿ ಯಲ್ಲಿಯೂ ಅವನು ಸಾಲವನ್ನು ಪಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ ಆದರೆ 1ನೇ ಪ್ರತಿವಾದಿ ತನ್ನ ಲಿಖಿತ-ಹೇಳಿಕೆಯಲ್ಲಿ ದಿನಾಂಕ 11-04-1999 ರಲ್ಲಿ ಎಂದು ಮತ್ತು 2ನೇ ಪ್ರತಿವಾದಿ ತನ್ನ ಲಿಖಿತ-ಹೇಳಿಕೆಯಲ್ಲಿ 1990 ನೇ ಸಾಲಿನಲ್ಲಿ ಎಂದು ಹಾಗೂ 3ನೇ ಪ್ರತಿವಾದಿ ದಿನಾಂಕ 11.04.1999 ರಂದು ಎಂದು ಹಾಗೂ 4ನೇ ಪ್ರತಿವಾದಿ ತನ್ನ ಲಿಖಿತ-ಹೇಳಿಕೆಯಲ್ಲಿ 1990 ನೇ ಸಾಲಿನಲ್ಲಿ ವಾಟ್ನೀ ಪತ್ರದಂತೆ ಪಾಲು-ವಿಭಾಗ ಆಗಿದೆ ಎಂದು ಹೇಳಿರುತ್ತಾರೆ ಆದರೆ ಆ ರೀತಿಯ 1990ನೇ ಸಾಲಿನ ವಾಟ್ನಿಪತ್ರವನ್ನು 2 ಮತ್ತು 4ನೇ ಪ್ರತಿವಾದಿಗಳು ಹಾಜರುಪಡಿಸಿಲ್ಲ ಅಲ್ಲದೇ 3 ಮತ್ತು 7ನೇ ಪ್ರತಿವಾದಿಗಳು ಹಾಜರುಪಡಿಸಿರುವಂತಹ ದಿನಾಂಕ 11-04-1999 ರ ಜುಬಾನಿ ಪಾಲು-

ವಿಭಾಗ ಪತ್ರ ನೋಂದಣಿಯಾಗಿರುವುದಿಲ್ಲ ಮತ್ತು ಅದು ಯಾವುದೇ ಸ್ಟಾಂಪ್ ಪೇಪರ್ ಮೇಲೆ ಇರುವುದಿಲ್ಲ ಕೇವಲ ಬಿಳಿ ಹಾಳೆಯ ಮೇಲೆ ಇರುತ್ತದೆ ಅಲ್ಲದೇ ವಾದಿಗಳು ಈ ಮಧ್ಯಂತರ ಅರ್ಜಿಯಲ್ಲಿ ಕೇವಲ ದಾವಾ ಆಸ್ತಿಗಳನ್ನು 1 ರಿಂದ 3, 6 ಮತ್ತು 7ನೇ ಪ್ರತಿವಾದಿಗಳು ಯಾವುದೇ ರೀತಿ ಪರಭಾರೆ ಮಾಡದಂತೆ ದಾವೆ ಅಂತಿಮವಾಗಿ ಇತ್ಯರ್ಥಗೊಳ್ಳುವವರೆಗೆ ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ನೀಡಬೇಕು ಎಂದು ಕೋರಿರುವುದರಿಂದ ಹಾಗೂ ವಾದಿಗಳು 1ನೇ ಪ್ರತಿವಾದಿಯ ಮಕ್ಕಳು ಇರುವ ಕಾರಣ ಮೇಲ್ನೋಟಕ್ಕೆ ದಾವಾ ಆಸ್ತಿಗಳು ವಾದಿಗಳ ಮತ್ತು ಪ್ರತಿವಾದಿಗಳ ಪಿತ್ರಾರ್ಜಿತ ಒಟ್ಟು ಕುಟುಂಬದ ಆಸ್ತಿಗಳು ಎಂದು ಕಂಡು ಬರುತ್ತದೆ ಅಲ್ಲದೇ ಪ್ರತಿವಾದಿಗಳು ತಮ್ಮ ಲಿಖಿತ-ಹೇಳಿಕೆಗಳಲ್ಲಿ ತೆಗೆದುಕೊಂಡಂತಹ ಪ್ರತಿರಕ್ಷೆಯ ಪ್ರಕಾರ 1990 ರಲ್ಲಿ ಅಥವಾ 1999 ರಲ್ಲಿ ಪಾಲು-ವಿಭಾಗ ಆಗಿದೆ ಅಥವಾ ಇಲ್ಲ ಎನ್ನುವುದು ಮತ್ತು ದಾವಾ 'ಬ' ತಪಶೀಲಿನ 1ನೇ ಆಸ್ತಿಯು 1ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಹೌದೋ ಅಥವಾ ಅಲ್ಲ ಮತ್ತು ದಾವಾ 'ಅ' ತಪಶೀಲಿನ 4ನೇ ಆಸ್ತಿ ಹಾಗೂ 'ಬ' ತಪಶೀಲಿನ 2 ಮತ್ತು 3ನೇ ಆಸ್ತಿಗಳು 3 ಮತ್ತು 7ನೇ ಪ್ರತಿವಾದಿಗಳ ಸ್ವಯಾರ್ಜಿತ ಆಸ್ತಿಗಳೋ ಅಥವಾ ಅಲ್ಲ ಎನ್ನುವುದಕ್ಕೆ ಸಾಕ್ಷಿ ವಿಚಾರಣೆ ಅಗತ್ಯವಿರುತ್ತದೆ ಅಲ್ಲದೇ ಈ ಹಂತದಲ್ಲಿ ದಾವಾ ಆಸ್ತಿಗಳು ಮೇಲ್ನೋಟಕ್ಕೆ ವಾದಿಗಳ ಮತ್ತು ಪ್ರತಿವಾದಿಗಳ ಜಂಟಿ ಕುಟುಂಬದ ಆಸ್ತಿಗಳು ಎಂದು ಕಂಡು ಬರುತ್ತದೆ ಆದ್ದರಿಂದ ವಾದಿಗಳು ಮೇಲ್ನೋಟದ ಕೇಸು ಇರುವುದನ್ನು ತೋರಿಸಿರುತ್ತಾರೆ ಕಾರಣ ಅಂಶ 1 ನ್ನು ಸಕಾರಾತ್ಮಕವಾಗಿ ಉತ್ತರಿಸಿದ್ದೇನೆ.

10. ಅಂಶ-2 ಮತ್ತು 3 - ವಾದಿಗಳು ಮೇಲ್ನೋಟದ ಕೇಸು ಇರುವುದನ್ನು ತೋರಿಸಿದ್ದರೂ ಸಹ ಅನುಕೂಲತೆಯ ಒಲವು ತಮ್ಮ ಪರ ಇದೆ ಎಂದು ಮತ್ತು ಒಂದು ವೇಳೆ ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ ತಾತ್ಕಾಲಿಕ ನಿರ್ಭಂದಕಾಜ್ಞೆ ನೀಡದೇ ಇದ್ದರೆ ತಮಗೆ ಹಣದ ರೂಪದಲ್ಲಿ ತುಂಬಲಾರದಂತಹ ನಷ್ಟ ಉಂಟಾಗುತ್ತದೆ ಎನ್ನುವುದನ್ನು ತೋರಿಸಲೇಬೇಕು. ವಾದಿಗಳು ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ನೀಡದೇ ಇದ್ದರೆ ದಾವಾ ಆಸ್ತಿಗಳನ್ನು 1 ರಿಂದ 3, 6 ಮತ್ತು 7ನೇ ಪ್ರತಿವಾದಿಗಳು ಪರಭಾರೆ ಮಾಡಿದರೆ ಅದರಿಂದ ವಾದಿಗಳಿಗೆ ತಮ್ಮ ಹಿಸ್ಸೆಯನ್ನು ಪಡೆದುಕೊಳ್ಳಲು ತೊಂದರೆಯಾಗುತ್ತದೆ ಹಾಗೂ ತಮ್ಮ ಹಿಸ್ಸೆಯ ಆಸ್ತಿಗಳನ್ನು ಅನುಭವಿಸುವುದರಿಂದ ವಂಚಿತರಾಗುತ್ತಾರೆ ಅದರಿಂದ ವಾದಿಗಳಿಗೆ ಹಣದ ರೂಪದಲ್ಲಿ ತುಂಬಲಾರದಂತಹ ನಷ್ಟ ಉಂಟಾಗುತ್ತದೆ ಹಾಗೂ ಒಂದು ವೇಳೆ ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ ದಾವಾ ಆಸ್ತಿಗಳನ್ನು ದಾವೆ ಅಂತಿಮವಾಗಿ ಇತ್ಯರ್ಥಗೊಳ್ಳುವವರೆಗೆ ಯಾವುದೇ ರೀತಿ ಮಾರಾಟ ಮಾಡದಂತೆ ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ನೀಡಿದರೆ ಅದರಿಂದ ಪ್ರತಿವಾದಿಗಳಿಗೆ ಯಾವುದೇ ರೀತಿಯ ನಷ್ಟ ಹಾಗೂ ಅನ್ಯಾಯ ಉಂಟಾಗುವುದಿಲ್ಲ ಆದ್ದರಿಂದ ಅನುಕೂಲತೆಯ ಒಲವು ವಾದಿಗಳ ಪರ ಇರುತ್ತದೆ ಮತ್ತು ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ನೀಡದೇ ಇದ್ದರೆ ವಾದಿಗಳಿಗೆ ಹಣದ ರೂಪದಲ್ಲಿ ತುಂಬಲಾರದ ನಷ್ಟ ಉಂಟಾಗುತ್ತದೆ ಆದ್ದರಿಂದ ಅಂಶ 2 ಮತ್ತು 3 ನ್ನು ಸಕಾರಾತ್ಮಕವಾಗಿ ಉತ್ತರಿಸಿದ್ದೇನೆ.

11. ಅಂಶ-4 – ಮೇಲಿನ ಅಂಶಗಳಲ್ಲಿ ಚರ್ಚಿಸಲಾದ ಕಾರಣಗಳಿಗೆ ಈ ಕೆಳಕಂಡಂತೆ ಮಾಡಿದ:

## ಆದೇಶ

ವಾದಿಗಳು ಸಿ. ಪ್ರ. ಸಂ. ಆದೇಶ 39 ನಿಯಮ 1 ಮತ್ತು 2 ರ ಅಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ-1 ನ್ನು 100/- ರೂ.ಗಳ ಖರ್ಚಿನ ಮೇಲೆ ಪುರಸ್ಕರಿಸಲಾಗಿದೆ.

ದಾವಾ ಆಸ್ತಿಗಳನ್ನು ದಾವೆ ಅಂತಿಮವಾಗಿ ಇತ್ಯರ್ಥಗೊಳ್ಳುವವರೆಗೆ ಯಾವುದೇ ರೀತಿ ಪರಭಾರೆ ಮಾಡದಂತೆ 1 ರಿಂದ 3 ಮತ್ತು 6 ಹಾಗೂ 7 ನೇ ಪ್ರತಿವಾದಿಗಳ ವಿರುದ್ಧ ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ನೀಡಿದೆ.

(ನನ್ನ ಉಕ್ತಲೇಖನದ ಪ್ರಕಾರ ಶೀಘ್ರಲಿಪಿಗಾರರಿಂದ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ಅದರಲ್ಲಿದ್ದ ಲೋಪದೋಷಗಳನ್ನು ತಿದ್ದಿ ಇಂದು ದಿನಾಂಕ 19ನೇ ನವಂಬರ್ 2020 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

**(ವೈ. ಕೆ. ಬೇನಾಳ)**
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.